ಜೈಲಧಿಕಾರಿಗೆ, 'ಅಪ್ಪಣ್ಣನನ್ನು ಸ್ವಲ್ಪ ದಿನ ಇಟ್ಟುಕೊಳ್ಳಿ. ನಮಗೆ ಏನಾದರೂ ಕೆಲಸಕ್ಕೆ ಆಗುತ್ತದೆ. ಅವನಿಗೂ ಮನೆಗೆ ಹೋಗುವ ಅರ್ಜೆಂಟ್ ಇದ್ದಹಾಗಿಲ್ಲ' ಎಂದು ಸೂಚನೆ ಕೊಟ್ಟ. ಹಾಗಾಗಿ ಅವನನ್ನು ಅಲ್ಲಿಯೇ ಇರಿಸಿಕೊಂಡರು.

ಅಲ್ಲಿನ ಸಿಬ್ಬಂದಿಗಳ ಪರಿಚಯ ಇದ್ದುದರಿಂದ, ಅವನೂ ಹೆಚ್ಚು ತಲೆಕೆಡಿಸಿಕೊಳ್ಳದೆ ಅವರ ಬಟ್ಟೆಗಳಿಗೆಲ್ಲ ಮೊದಲಿನಂತೆಯೇ ಇಸ್ತ್ರಿ ಹಾಕಿಕೊಂಡು ಕಾಲ ಕಳೆದ. ಈಗ ಬಟ್ಟೆಗಳ ಸಂಖ್ಯೆ ಹೆಚ್ಚಾಗಿತ್ತು. ಹೆಡ್ ಕಾನ್ಸ್ಟೆಬಲ್ ಕರುಣಾಕರ ಹೊರಗಿನಿಂದಲೂ ಎಲ್ಲಿಂದಲೋ ದೊಡ್ಡದೊಡ್ಡ ಚೀಲಗಳಲ್ಲಿ ಒಗೆದ ಬಟ್ಟೆಗಳನ್ನು ತಂದು ಇಸ್ತ್ರಿ ಹಾಕಿಸಿಕೊಂಡು ಒಯ್ಯುತ್ತಿದ್ದ. ಆಗ ಅವನ ಸಹೋದ್ಯೋಗಿಗಳು ನಗುತ್ತಾ, 'ಓ ಇವತ್ತು ಅಣ್ಣನಿಗೆ ಜಾಕ್‌ಪಾಟ್' ಎಂದು ಹೇಳುತ್ತಿದ್ದರು. ಅವನು ಬೇರೆಯವರ ಬಟ್ಟೆಗಳಿಗೂ ಇಸ್ತ್ರಿ ಹಾಕಿಸಿ ಅವರಿಂದ ಹಣ ಪಡೆಯುತ್ತಿದ್ದನೋ ಏನೋ!

ಕರುಣಾಕರನ ಬಗ್ಗೆ ಇಂತಹ ಅಂದರೆ ಅವನು ಚಿತ್ರವಿಚಿತ್ರ ರೀತಿಗಳಲ್ಲಿ ಹಣ ಸಂಪಾದನೆ ಮಾಡುತ್ತಿದ್ದ ಹಲವಾರು ಕಥೆಗಳು ಇವತ್ತಿಗೂ ಚಾಲ್ತಿಯಲ್ಲಿವೆಯಾದ ಕಾರಣ ಅವನು ಬೇರೆಯವರ ಬಟ್ಟೆಗಳಿಗೂ ಇಸ್ತ್ರಿ ಹಾಕಿಸಿ ಹಣ ಸಂಪಾದನೆ ಮಾಡಿದ್ದರೂ ಮಾಡಿರಬಹುದು ಅನಿಸುತ್ತದೆ.

ಇಸ್ತ್ರಿ ಅಪ್ಪಣ್ಣನ ತಳ್ಳುಗಾಡಿಯನ್ನೂ ಇಸ್ತ್ರಿ ಪೆಟ್ಟಿಗೆಯನ್ನೂ ಜೈಲಿನ ಆವರಣದೊಳಗೆಯೇ ತಂದಿಡಲಾಗಿತ್ತು. ಮೇಲಧಿಕಾರಿಗಳು ಕೇಳಿದರೆ 'ಇದನ್ನು ಮುಟ್ಟುಗೋಲು ಹಾಕಿಕೊಂಡಿದ್ದೇವೆ' ಎಂದು ಹೇಳೋಣ ಎಂದು ಅಧಿಕಾರಿಗಳು ಯೋಚಿಸಿದ್ದರು. ಆದರೆ ಯಾರೂ ಯಾವತ್ತೂ ಅದರ ಬಗ್ಗೆ ವಿಚಾರಿಸಲಿಲ್ಲ.

ಆಮೇಲೆ ಕರುಣಾಕರನಿಗೆ ವರ್ಗಾವಣೆಯಾಯಿತು. ಹೋಗುವ ಮುಂಚೆ ಅಪ್ಪಣ್ಣನನ್ನು ಮನೆಗೆ ಕಳುಹಿಸಲು ಅವನಿಗೂ ನೆನಪಾಗಲಿಲ್ಲ. ಅಷ್ಟರಮಟ್ಟಿಗೆ ಅವನ ಇರವು ಅಲ್ಲಿ ಸಹಜವಾಗಿ ಹೊಂದಿಕೊಂಡಿತ್ತು. ಅಲ್ಲಿ ವಿಚಿತ್ರ ಅನ್ನುವಂಥದ್ದು ಯಾವುದೂ ಇರಲಿಲ್ಲ. ಆಮೇಲೆ ಜೈಲಧಿಕಾರಿಗಳೂ ವರ್ಗವಾದರು; ಕೆಲವರು ನಿವೃತ್ತರಾದರು; ಕಾಲ ಸಂದಿತು. ಅಪ್ಪಣ್ಣ ಯಾಕಾಗಿ ಜೈಲಿನಲ್ಲಿದ್ದಾನೆ, ಅವನು ಹೊರಗೆ ಹೋಗುವುದು ಯಾವಾಗ ಎನ್ನುವುದೇ ಮರೆತುಹೋದಂತೆ ಅವನು ಅಲ್ಲಿ ಇಸ್ತ್ರಿ ಹಾಕಿಕೊಂಡಿದ್ದ.

ಹೀಗೆ ಇಸ್ತಿರಿ ಅಪ್ಪಣ್ಣನು ಮಾಕಾಲ ಪಟ್ಟಣದ ಕೋಳದಬೈಲು ಜೈಲಿನಲ್ಲಿ ಇಸ್ತ್ರಿ ಹಾಕುವ ಕಾಯಕ ಮಾಡುತ್ತಾ ಇಪ್ಪತ್ತೆರಡು ವರ್ಷಗಳನ್ನು ಕಳೆದ. ಗಂಟೆಗಳ ಲೆಕ್ಕವನ್ನೂ, ದಿನಗಳ ಲೆಕ್ಕವನ್ನೂ, ತಿಂಗಳುಗಳ ಲೆಕ್ಕವನ್ನೂ, ಋತುಗಳ ಲೆಕ್ಕವನ್ನೂ, ವರ್ಷಗಳ ಲೆಕ್ಕವನ್ನೂ ಮರೆತುಬಿಟ್ಟು ಇಸ್ತ್ರಿ ಹಾಕುವ ಯಂತ್ರವಾಗಿ ಹೋಗಿದ್ದ ಅಪ್ಪಣ್ಣನಿಗೆ ಇಪ್ಪತ್ತೆರಡು ವರ್ಷಗಳು ಕಳೆದುದು ಗೊತ್ತಾಗುವ ಸಂಭವ ಇರಲಿಲ್ಲ. ಈ ಇಸ್ತ್ರಿ ಯಂತ್ರಕ್ಕೆ ಇಂಧನದ ಹಾಗೆ ಅನ್ನ-ಆಹಾರಗಳನ್ನು ಜೈಲು ಸಿಬ್ಬಂದಿಗಳು ಹಾಕುತ್ತಿದ್ದರು. ಆಹಾರ ತಯಾರಿಸುವ ಕೆಲಸವನ್ನೂ ಒಮ್ಮೊಮ್ಮೆ ಇಸ್ತ್ರಿ ಯಂತ್ರವಾದ ಅಪ್ಪಣ್ಣನೂ ಮಾಡಬೇಕಾಗಿತ್ತು. ಆದರೆ ಜೈಲು ಸಿಬ್ಬಂದಿಗಳ ಬಟ್ಟೆಗಳನ್ನೆಲ್ಲ ಒಗೆದು ಇಸ್ತ್ರಿ ಮಾಡಿಕೊಡಬೇಕಾದುದು ಅವನ ಪ್ರಧಾನವಾದ ಕೆಲಸವಾಗಿತ್ತು.

ಇಸ್ತಿರಿ ಅಪ್ಪಣ್ಣ ಜೈಲು ಪಾಲಾಗಿ ಜನರ ದೃಷ್ಟಿಯಿಂದಲೂ ನೆನಪಿನಿಂದಲೂ ಮರೆಯಾಗಿ ಹೋಗಿದ್ದ. ಆಗ ಯೋಗಾಯೋಗ ಎಂಬಂತೆ ಹಿರಿಯ ಪತ್ರಕರ್ತ ರಮಾನಂದ ಸರಳಾಯರಿಗೆ ಅಪ್ಪಣ್ಣನ ನೆನಪಾಯಿತು. ತಾನು ವರದಿ ಮಾಡಿದ ಒಂದು ಡ್ರಗ್ ಪೆಡ್ಲಿಂಗ್ ಪ್ರಕರಣದ ಬಗ್ಗೆ ಯೋಚಿಸುತ್ತಿದ್ದಾಗ ಅವರಿಗೆ, ತಮ್ಮ ಉದ್ಯೋಗದ ಪ್ರಾರಂಭದ ದಿನಗಳಲ್ಲಿ ವರದಿಗಾರಿಕೆಯ ಕೆಲಸ ಇಲ್ಲದಿದ್ದಾಗ ಕೋರ್ಟಿಗೆ ಹೋಗಿ ಕುಳಿತುಕೊಳ್ಳುತ್ತಿದ್ದಾಗ ಕಾಣಲು ಸಿಕ್ಕಿದ ಇಸ್ತಿರಿ ಅಪ್ಪಣ್ಣನ ಗಾಂಜಾ ಪ್ರಕರಣ ನೆನಪಾಯಿತು. ಆಮೇಲೆ ಏನಾಯಿತು ಅದು? ಅವರಿಗೆ ಇದ್ದಕ್ಕಿದ್ದಂತೆ ಅದರ ಬಗ್ಗೆ ಕುತೂಹಲ ಹುಟ್ಟಿತು. ಅದೇ ದಿನ ಸಂಜೆ ಬೈಕ್ ಹಿಡಿದುಕೊಂಡು ಕೋಳದಬೈಲು ಏರಿಯಕ್ಕೆ ಹೋಗಿ ಇಸ್ತಿರಿ ಅಪ್ಪಣ್ಣನ ಕುರಿತು ವಿಚಾರಿಸತೊಡಗಿದರು.

* * *

ರಮಾನಂದ ಸರಳಾಯರು ತಮ್ಮ ಪತ್ರಕರ್ತ ಮಿತ್ರರನ್ನು ಕರೆದುಕೊಂಡು ವಿವಿಧ ಇಲಾಖೆಗಳನ್ನು ಸಂಪರ್ಕಿಸಿ ಅಪ್ಪಣ್ಣನನ್ನು ಜೈಲಿನಿಂದ ಹೊರಗೆ ಕರೆದುಕೊಂಡು ಬರಲು ಯಶಸ್ವಿಯಾದರು. ತನ್ನ ತಪ್ಪು